ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Thursday, the 10th May, 1979/Vaishaka 20, 1901 S E.

The House met in the Assembly Chamber, Vidhana Soudha, at one of the Clock.

[MR. SPEAKER (SRI P. VENKATARAMANA) in the Chair]

STARRED QUESTIONS
(To which Oral Answers were given)

Balwadies run by Bijapur Town Municipality

119. SRI S. S. ARAKERI (Balloli).— Will the Minister for Municipal Administration be pleased to state :—

(a) the number of Balawadies run under the Bijapur Town Municipality ;

(b) the number of Balasevikas and conductors including Balasevikas and Conductors belonging to the S.C. and S.Ts ;

SRI H. C. SRIKANTAIAH (Minister for Municipal Administration).—

(a) Four.

(b) 4 Balasevikas of whom one belongs to S. C.

4 Conductresses of whom one belongs to S. C.

ಶ್ರೀ ಎಸ್. ಎಸ್. ಅರಕೇರಿ.— ಸ್ವಾಮಿ, ಬಿಜಾಪುರ ಪುರಸಭೆಯವರು ನಡೆಸುತ್ತಿರುವ ಬಾಲವಾಡಿಗಳ ಸಂಖ್ಯೆ ೪ ಎಂದು ಉತ್ತರ ಕೊಟ್ಟಿದ್ದೀರಿ ಇಲ್ಲಿನ ಜನಸಂಖ್ಯೆ ೧ ಲಕ್ಷ ೫೦ ಸಾವಿರಕ್ಕಿಂತ ಜಾಸ್ತಿ ಇದೆ. ಆದರೆ ಬಾಲವಾಡಿಗಳು ಕಡಿಮೆ ಇರುತ್ತವೆ. ತಾವು ಈ ಬಾಲವಾಡಿಗಳನ್ನು ಮಂಜೂರು ಮಾಡುವಾಗ ಯಾವ ನೀತಿ ನಿಯಮಗಳನ್ನು ಅನುಸರಿಸುತ್ತೀರಿ ?

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸಾಮಾನ್ಯವಾಗಿ ಹಿಂದುಳಿದ ಪ್ರದೇಶಗಳಲ್ಲಿ, ದೀನದಲಿತರು ಇರತಕ್ಕ ಪ್ರದೇಶಗಳಲ್ಲಿ ಹರಿಜನ ಗಿರಿಜನರು ಇರುವ ಪ್ರದೇಶಗಳಲ್ಲಿ ಮಂಜೂರಾತಿ ಕೊಡುತ್ತೇವೆ.

ಶ್ರೀ ಎಸ್. ಎಸ್. ಅರಕೇರಿ.— ಇಲ್ಲಿ ೭ ಮಂದಿಯ ಪೈಕಿ ಕೇವಲ ಒಬ್ಬರು ಮಾತ್ರ ಅನುಸೂಚಿತ ಜಾತಿಯವರು ಇದ್ದಾರೆ. ಅಂದಮೇಲೆ ಸಾಕಷ್ಟು ಪ್ರಮಾಣದಲ್ಲಿ ಈ ನೇಮಕಾತಿ ಮಾಡಿಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

---

† indicates that remarks or speeches have not been revised by the member concerned.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.— ಇಲ್ಲಿ ೨ ಬಾಲವಾಡಿಗಳಿವೆ, ಎರಡರಲ್ಲೂ ಒಬ್ಬೊಬ್ಬ ಹರಿಜನರನ್ನು ನೇಮಕ ಮಾಡಿದೆ. ಅಂದರೆ ೧೮ ಪರ್ಸೆಂಟ್ ಬದಲು ೨೫ ಪರ್ಸೆಂಟ್ ನೇಮಕಾತಿ ಮಾಡಿದಂತಾಯಿತು.

ಶ್ರೀ ಎಸ್. ಎಸ್. ಅರಕೇರಿ.— ನಾನು ಕೇಳುತ್ತಿರುವುದು ಬಾಲಕಿಯರ ಪೈಕಿ ೭ ಮಂದಿಯಲ್ಲಿ ಒಬ್ಬರು ಮಾತ್ರ ಹರಿಜನರಿದ್ದಾರೆ. ಎರಡು ಜನ ಇರಬೇಕಾಗಿತ್ತು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.— ಇನ್ನೊಂದು ನೇಮಕ ಮಾಡುವುದಿದ್ದರೆ ನೋಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.— ಬಿಜಾಪುರದಲ್ಲಿ ಹೆಚ್ಚು ಬಡವರು ಹಾಗೂ ಹರಿಜನರೇ ಇರುವುದರಿಂದ ಅಲ್ಲಿ ಬಾಲವಾಡಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ತೆರೆಯಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.— ಪ್ರಯತ್ನ ಮಾಡುತ್ತೇನೆ.

Water Supply Scheme in Mangalore

313. SRI B. V. KAKKILAYA (Vittal).— Will the Minister for Municipal Administration be pleased to state :—

(a) whether the Government have received a scheme for constructing storage tanks at higher places in Mangalore Municipality to improve water supply position in the city.

(b) if so, when was the scheme submitted to Government.

(c) the cost of the Scheme ;

(d) whether the Government accorded sanction to the scheme and if so when ?

SRI H. C. SRIKANTAIAH (Minister for Municipal Administration)—

(a) Yes.

(b) The Karnataka Urban Water Supply and Drainage Board submitted the proposals on 17th January 1979.

(c) Rs. 35.00 lakhs.

(d) The Government have accorded sanction to the scheme in Notification No. HUD 303 MNS 77 dated 27th March 1979.

ಶ್ರೀ ಬಿ. ವಿ. ಕಕ್ಕಿಲಾಯ.— ಸ್ವಾಮಿ, ಈ ಯೋಜನೆಗೆ ತಾ॥ ೨೭-೩-೭೯ರಲ್ಲಿ ಮಂಜೂರಾತಿ ನೀಡಿರುವುದಾಗಿ ತಿಳಿಸಿದ್ದೀರಿ. ಅಲ್ಲಿ ಏನಾದರೂ ಕೆಲಸ ಪ್ರಾರಂಭವಾಗಿದೆಯೇ ? ಇದರ ಬಗ್ಗೆ ತಮಗೆ ಏನಾದರೂ ವರದಿ ಬಂದಿದೆಯೇ ?